International Journal of Kannada Research
www.kannadajournal.com

ISSN: 2454–5813
IJSR 2017; 3(1): 84-85
© 2017 IJKS
www.kannadajournal.com
Received: 14-11-2016
Accepted: 15-12-2016

**ಸಂಶೋಧಕರು**
ಪ್ರೋ. ಮಲ್ಲಿಕಾರ್ಜುನ ಪೋಲಿಸ ಪಾಟೀಲ, ಶರಣಬಸವೇಶ್ವರ ಕಲಾ ಮಹಾವಿದ್ಯಾಲಯ ಕಲಬುರಗಿ.

**Correspondence**
**ಸಂಶೋಧಕರು**
ಪ್ರೋ. ಮಲ್ಲಿಕಾರ್ಜುನ ಪೋಲಿಸ ಪಾಟೀಲ, ಶರಣಬಸವೇಶ್ವರ ಕಲಾ ಮಹಾವಿದ್ಯಾಲಯ ಕಲಬುರಗಿ.

# ಭಾರತೀಯ ಸಂಗೀತದಲ್ಲಿ ವಾದ್ಯ ಪರಂಪರೆ

## ಸಂಶೋಧಕರು

ಭಾರತೀಯ ಸಂಗೀತ ಶಾಸ್ತ್ರದಲ್ಲಿರುವಂತೆ ಅರವತ್ತ್ನಾಲ್ಕು ಕಲೆಗಳಲ್ಲಿ ಈ ಸಂಗೀತ ಕಲೆಯು ಒಂದಾಗಿರುವ ಕಲೆಯಾಗಿದೆ, ಅನೇಕ ಧರ್ಮಶ್ರದ್ಧೆಗಳ ನೆಲೆಗಳ ಬೀಡಾದ ಈ ನಮ್ಮ ನೆಲ ದೇವರನ್ನು 'ನಾದಬ್ರಹ್ಮ' 'ನಾದಲೋಲ' ಎಂದು ವರ್ಣಿಸಿರುವುದನ್ನು ನಾವು ಅನೇಕ ಗ್ರಂಥಗಳಿಂದ ತಿಳಿದುಕೊಂಡಿರುವ ವಿಷಯವಾಗಿದೆ. ಧಾರ್ಮಿಕ, ಸಾಮಾಜಿಕ, ಹಲವು ರಾಜಾಶ್ರಯಗಳಿಂದ, ಹಲವು ಆಚರಣೆಗಳಿಂದ ಸಂಗೀತ ಕಲೆಯನ್ನು ಪೋಷಿಸಿ, ಬೆಳೆಸಿದೆ, ಹಾಗೂ ಇಂದಿಗೂ ಬೆಳೆಸುತ್ತಾ ಬಂದಿದೆ.
ಲಲಿತಕಲೆಗಳೆಂದರೆ ನಮ್ಮ ಜನರಿಗೆ ವಿಶೇಷವಾದ ಪ್ರೀತಿ, ಭಕ್ತಿ ಮತ್ತು ಎಲ್ಲಿಲ್ಲದ ಉತ್ಸಾಹ ಈ ಕಲೆಗಳ ಸಾನಿಧ್ಯದಲ್ಲಿ ಮಾನವನು ಅದೇನೋ ಒಂದು ತರಹ ವರ್ಣಿಸಲಾರದಂತಹ ದೈವಿಕ ಆನಂದ ಪಡೆಯುತ್ತಾನೆ. ಅಂತರಂಗದ ಪರಿಶುದ್ಧತೆ, ಆತ್ಮಸಾಕ್ಷಾತ್ಕಾರಕ್ಕೆ ದಾರಿದೀಪವಾಗಿರುವು ಕಲೆಯು ಹೌದು. ನಾದ ಪ್ರಿಯನಾದ ಆ ದೇವರನ್ನು ಈ ಕಲೆಯ ಮೂಲಕ ಒಲಿಸಿಕೊಳ್ಳುತ್ತೇವೆ ಎಂಬ ದೊಡ್ಡ ಭರವಸೆಯು ನಮ್ಮ ಪರಂಪರೆಯಲ್ಲಿ ನೆಲೆಯೂರಿದೆ.
ಆತ್ಮೋನ್ನತಿಯ ಮಹಾಸಾಧನೆವಾಗಿರುವ ಈ ಲೌಕಿಕ ಬದುಕಿನಲ್ಲಿ, ದಿನನಿತ್ಯದ, ಸಾಮಾಜಿಕ ಜೀವನದಲ್ಲಿ ರಸಘಳಿಗೆ ನಿರ್ಮಿಸುವ ಸುಂದರ ಮಾಧ್ಯಮವಾಗಿ ಒಂದು ಅಪೂರ್ವ ಸ್ಥಾನ ಪಡೆದಿದೆ. ಸಂಗೀತದಂತೆ ವಾದ್ಯಗಳ ಸೃಷ್ಟಿಗೂ ಕೂಡ ನಿಸರ್ಗವೇ ಮೂಲಕಾರಣವಾಗಿದೆ. ಚೇತನದ ಪ್ರತಿಬಿಂಬವಾದ ಈ ಪ್ರಕೃತಿಯಲ್ಲಿ 'ಗಿಡಗಂಟೆಗಳ ಕೊರಳೊಳಗಿಂದ ಹಕ್ಕಿಗಳ ಹಾಡು' ಎಂಬ ಕವಿಯ ವಾಣಿಯಂತೆ ವಾದ್ಯಗಳ ಹುಟ್ಟು ಬೆಳವಣಿಗೆಗೆ ಪ್ರಕೃತಿಯ ವಾಣಿ ವಿಲಾಸವೇ ಮೂಲ ಪ್ರಚೋದನೆಗೆ ಕಾರಣವಾಗಿದೆ. 'ನಾದರೂಪನಾದ ಈ ಸೃಷ್ಠಿಯೊಡನೆಯೇ ಸಂಗೀತ ಕಲೆಯು ಹುಟ್ಟಿದೆ'. ವಿಶ್ವವು ವ್ಯಕ್ತಿಯ ಅಭಿವ್ಯಕ್ತ ಸಂಗೀತವೇ ಈ ಸೃಷ್ಠಿ.
ಸಂಗೀತದೊಡನೆಯೇ ವಾದ್ಯಗಳು ಹುಟ್ಟಿಕೊಂಡವು ಎಂಬದು ನಾವು ಅನೇಕ ಗ್ರಂಥಗಳಿಂದ ಓದಿ ತಿಳಿದುಕೊಂಡಿರುವ ವಿಷಯವಾಗಿದೆ. ಜನಪದದ ಭದ್ರಬುನಾದಿಯ ಮೇಲೆ ಜನಜೀವನದ ಒಡನಾಡಿಗಳಾಗಿ ವಾದ್ಯಗಳು ವಿಕಾಸಗೊಂಡಿವೆ. ವಾದ್ಯವು ಸ್ವರೋತ್ಪತ್ತಿಯ, ಧ್ವನಿಕಂಪನದ ಸಾಧನವಾಗಿದೆ. ವಾದ್ಯ ಸಂಗೀತವೆಂದರೆ ನಾದ ವಿನ್ಯಾಸಗಳ ವ್ಯವಸ್ಥೆಯಾಗಿದೆ. ಎಷ್ಟೋ ಸಲ ಗಾಯನಕ್ಕೆ ಮೀರಿ ಕೆಲವು ವಿಶಿಷ್ಟ ಪ್ರಯೋಗಗಳು ವಾದ್ಯ ಸಂಗೀತ ನೀಡುತ್ತದೆ.
ವೇದಗಳಲ್ಲಿ ಸಂಗೀತ ಮತ್ತು ವಾದ್ಯಗಳ ವಿವರಣೆ ಸಾಕಷ್ಟು ಬಂದಿವೆ. ಈ ಕಲೆಗಳ ಅಭ್ಯಾಸ, ಪ್ರಾಚೀನ ಕಾಲದಲ್ಲೆ ನಡೆದಿತ್ತು ಹಾಗೂ ವಾದ್ಯ ಮೇಳದ ಚಿತ್ರಗಳು ಅನೇಕ ಸಾಹಿತ್ಯಗಳಲ್ಲಿ ನಮಗೆ ದೊರೆತಿವೆ. ಸಾಮವೇದವು ಗಾಯನಶಾಸ್ತ್ರ ಕಲೆಯ ಬಗ್ಗೆ ತಿಳಿಸಿದರೆ ವೇದ ಪಠಣವು ಆ ಕಾಲದಲ್ಲಿ ನಡೆಯುತ್ತಿದ್ದವು ಎನ್ನುವುದಕ್ಕೆ ಹಾಗೂ ಆ ಕಾಲದಲ್ಲಿಯೂ ಸಂಗೀತಗೋಷ್ಠಿ ನಡೆಯುತ್ತಿದ್ದವು ಎನ್ನಲು ವೀಣೆ, ಕೊಳಲು, ಮದ್ದಳೆ, ಶಂಖ, ಮೊದಲಾದ ವಾದ್ಯಗಳ ಉಲ್ಲೇಖ ಈ ವೇದಕಾಲದ ಸಂಗೀತದ ಗ್ರಂಥಗಳಲ್ಲಿಯ ಮಾಹಿತಿ ನಮಗೆ ತಿಳಿಸುತ್ತದೆ.
ಇನ್ನೂ ವೇದಕಾಲದಲ್ಲಿ ದುಂದುಬಿಕೂಡ ಆ ಕಾಲದ ವಾದ್ಯವಾಗಿದೆ. ಯುದ್ದದ ಸಮಯದಲ್ಲಿ ಈ ವಾದ್ಯ ಉಪಯೋಗಿಸುವ ವಾದ್ಯವಾಗಿತ್ತು. ರಾಮಾಯಣ ಹಾಗೂ ಮಹಾಭಾರತದ ಕಾಲದಲ್ಲಿಯೂ ಕೂಡ ಅನೇಕ ಸಂಗೀತ ವಾದ್ಯಗಳ ವಿವರಣೆ ನಮಗೆ ದೊರಕುತ್ತದೆ. ವಿವಿಧ ಮಾಹಿತಿಗಳ ಪ್ರಕಾರ ಸಿಂಧೂ ಸಂಸ್ಕೃತಿಯ ಕೇಂದ್ರವಾದ ಹರಪ್ಪಾ ಮತ್ತು ಮೊಹೆಂಜೊದಾರ ಸ್ಥಳಗಳಲ್ಲಿಯೇ ಅನೇಕ ವಾದ್ಯಗಳು ನಮಗೆ ದೊರೆತಿರುವುದನ್ನು ನಾವು ಕಾಣುತ್ತೇವೆ.

ಸಂಗೀತ ಮತ್ತು ವಾದ್ಯದ ದೃಷ್ಟಿಯಿಂದ ನಮಗೆ ೧೨ನೇ ಶತಮಾನವು ಹೊಸ ಯುಗವನ್ನೇ ಪ್ರಾರಂಭಿಸಿತೆಂದು ಹೇಳಬಹುದು. ಸಂಗೀತ ಪ್ರಪಂಚಕ್ಕೆ ಹೊಸ ತಿರುವು ಹಾಗೂ ನವ ನಿರ್ಮಾಣ ನೀಡಿದ ಕಾಲ. ನಮ್ಮ ಭಾರತದಲ್ಲಿ ಮುಸ್ಲೀಂ ಅರಸರು ಸಂಗೀತ ಬಗ್ಗೆ ಬಹಳ ಅಭಿಮಾನ ಉಳ್ಳವರಾಗಿದ್ದರು ಹಾಗೂ ಪೋಷಕರು ಕೂಡ ಹೌದು. ಅದರು ಭಾರತ್ತಕೆ ಬರುವಾಗ ತಮ್ಮ ಜೊತೆ ಅನೇಕ ಪರ್ಷಿಯನ್ನ ಮತ್ತು ಅರೇಬಿಯಾದಿಂದ ಸಂಗೀತಗಾರರನ್ನು ಕರೆತಂದರು. ತುರ್ಕಿಯಾದ ಅಮೀರ ಖುಸ್ರೋ ಭಾರತೀಯ ತಾಯಿಯ ಉತ್ತರ ಭಾರತದ 'ಎತಹ್' ಎಂಬಲ್ಲಿ ಜನಿಸಿದನು. ಈತನು ಭಾರತೀಯ ಸಂಗೀತಕ್ಕೆ 'ಸ್ವರಶ್ರೇಣಿ' ಪದ್ಧತಿಯು ವಿಶೇಷವಾದ ಈ ಪದ್ಧತಿಯು ತಂದವರಲ್ಲಿ ವಿಶೇಷ ಕಾಣಿಕೆ ಸಲ್ಲಿಸಿದ ಮಹಾನ್ ವ್ಯಕ್ತಿ.

ಇಂತಹದರಲ್ಲಿ ಸಂಗೀತ ಮತ್ತು ವಾದ್ಯಗಳ ಅಭ್ಯಾಸವನ್ನು ಕೂಲಂಕುಷವಾಗಿ, ವಿಮರ್ಶಾತ್ಮಕವಾಗಿ ಮಾಡಿದ ಇವನು ಹಾಡುಗಾರಿಕೆಯಲ್ಲಿ ಹೊಸಶೈಲಿ ಹಾಗೂ ವಾದ್ಯಗಳಲ್ಲಿಯೂ ಭಾರತೀಯ ಸಂಗೀತದ ಶ್ರೀಮಂತಿಕೆಯನ್ನು ಹೆಚ್ಚಿಸಿದನು. 'ಸಿತಾರ' ಮತ್ತು 'ತಬಲಾ' ವಾದ್ಯದ ವಿಕಾಸ ಇಂದಿಗೂ ಜನಪ್ರಿಯವಾಗಿರುವ 'ಖವ್ವಾಲಿ' ಹಾಡುಗಾರಿಕೆ ಕೂಡ ಇವನ ಕೊಡುಗೆಯಾಗಿದೆ ಎಂದು ಹೇಳಬಹುದು.

ಕಲಾ ಪ್ರಪಂಚದಲ್ಲಿ ತಬಲಾ ವಾದ್ಯವು ವಿಸ್ಮಯಗಳಲ್ಲಿ ಒಂದಾಗಿರುವ ವಾದ್ಯದ ಮೂಲಕ ಸ್ವರಗಳನ್ನು, ಅದರ ಬೋಲುಗ ಳನ್ನು ಬಹು ಸುಂದರವಾಗಿ, ಚಮಾತ್ಕಾರಿಕವಾಗಿ ತೇಲಿಸುವ ಕಲೆಯನ್ನು ಕೈಗೂಡಿಸಿಕೊಂಡಿದೆ. "ಕಲೆಯ ನೆಲೆಯಿರುವುದು ಬೆರಳ ತುದಿಯಲ್ಲಿ" ಎಂಬ ಮಾತು ಹಾಗೂ "ಶೃತಿ ಮಾತಾಃ ಲಯಃ ಪಿತಾಃ" ಸಂಗೀತ ಕ್ಷೇತ್ರಕ್ಕೆ ವಿಶೇಷವಾಗಿ ಅನ್ವಯಿಸುತ್ತದೆ.

ಸಂಗೀತದಂತೆ ವಾದ್ಯಗಳ ಸೃಷ್ಟಿಗೂ ಈ ನಮ್ಮ ನಿಸರ್ಗದ ಪರಿಸರವೇ ಮೂಲ ಕಾರಣ ಎಂದು ನಾವು ಹೇಳಬಹುದು. ಸಂಗೀತದೊಡನೆ ವಾದ್ಯಗಳು ಹುಟ್ಟಿಕೊಂಡಿವೆ. ಜನಪದದ ಭದ್ರಬುನಾದಿಯ ಮೇಲೆ ಜನಜೀವನದ ಒಡನಾಡಿಯಾಗಿ ವಾದ್ಯಗಳು ವಿಕಾಸಗೊಂಡಿವೆ ಎನ್ನುವುದು ಎಲ್ಲ ಕಲಾವಿದರಿಗೂ ಚಿರಪರಿಚಿತವಾದಂತಹ ಸಂಗತಿ. ಕಲೆ ಶಾಸ್ತ್ರಗಹಳ ಬೆಳವಣಿಗೆಯಿಂದಾಗಿ ಹೆಚ್ಚಿನ ಮೆರಗನ್ನು ಪಡೆದಿದೆ. ಹಲವು ಹೊಸ ಹೊಸ ಶೈಲಿಗಳ ಪರಿಣಾಮವಾಗಿ ಹಲವಾರು ನಿಟ್ಟಿನಲ್ಲಿ ವಿಕಾಸಗೊಂಡು ಮುನ್ನಡೆಯುತ್ತಿರುವ ಈ ಕಲೆಗೆ ವಾದ್ಯ ಪ್ರಪಂಚವೇ ಸಾಕ್ಷಿಯಾಗಿದೆ.

ಕಲಾವಿದ ತಾನು ನೋಡಿದ, ಅನುಭವಿಸಿದ, ಭಾವನೆಗಳಿಗೆ ನೂತನ ಅಭಿವ್ಯಕ್ತಿ ನೀಡಲು ಪ್ರಯತ್ನಿಸಿದಾಗ ಅಲ್ಲಿ ಬಗೆ ಬಗೆಯ ವಾದ್ಯಗಳು ಹುಟ್ಟಿಕೊಂಡವೆಂಬುವು ನಾವುಹಲವಾರು ತಜ್ಞರ ಆಧಾರ ಗ್ರಂಥಗಳಿಂದ ತಿಳಿದುಕೊಂಡಿದ್ದೇವೆ. ಹಾಡುಗಾರಿಕೆ ಹೊಸ ಗತ್ತನ್ನು ನೀಡಲು ಅನೇಕ ಬಗೆಯ ವಾದ್ಯಗಳು ಹುಟ್ಟಿಕೊಂಡಿವೆ. ಕಲಾವಿದನ ಪ್ರತಿಭೆಯಿಂದ ಕ್ರಮೇಣ ಸುಧರಣೆಗೊಂಡು ಆಯಾ ಸಮಾಜದ ಧಾರ್ಮಿಕ ಆಚರಣೆಗೆ ತಕ್ಕಂತೆ ಅವುಗಳ ಉಪಯೋಗವು ಹೆಚ್ಚಾಗತೊಡಗಿತು.

ವಿಶೇಷವಾದಂತಹ ತಬಲಾ ವಾದ್ಯವನ್ನು ಪಖಾವಜದ ಎರಡು ಭಾಗಗಳೆಂದು ಹೇಳುತ್ತೇವೆ. ತಬಲಾ ನುಡಿಸುವ ಕಲಾವಿದನು ತಬಲಾ ನಾದವನ್ನು ಪ್ರಭಾವಪೂರ್ಣ ನುಡಿಸಿ, ಮೋಹಕವಾದ ಶಬ್ದವನ್ನು ಬೆರಳುಗಳಿಂದ ಚಲಿಸುವ ಚಮತ್ಕಾರವನ್ನು ಜನರ ಮನಸ್ಸನ್ನು ಸೆರೆ ಹಿಡಿಯುವುದರೊಂದಿಗೆ ಇಂದು ತಬಲಾ ವಾದ್ಯವು ಪ್ರಪಂಚದ ಬಹು ಎತ್ತರಕ್ಕೆ ಬೆಳೆದು ಈಗ ಈ ಕಲೆಯು ಅಗ್ರ ಸ್ಥಾನದಲ್ಲಿದೆ.